<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 31209-2022

ಸಿಡಬ್ಲೂ -13 ಪಿಡಬ್ಲೂ- 9

| | |
|---|---|
| ಸಾಕ್ಷಿದಾರನ ಹೆಸರು | : ರವಿ ಎಂ ಎಸ್ |
| ತಂದೆಯ ಹೆಸರು | : ಲೇಟ್ ಶೇಖರಪ್ಪ |
| ವಯಸ್ಸು | : 42 ವರ್ಷ |
| ಕೆಲಸ | : ಪಿ ಐ (ಜ್ಞಾನಭಾರತಿ ಪೋ ಠಾ) |
| ವಾಸ | : ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 20-11-2024 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>

<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನಾನು ಅಕ್ಟೋಬರ್ 2021 ರಿಂದ ಡಿಸೆಂಬರ್ 2022 ರವರೆಗೆ ಶೇಷಾದ್ರಿಪುರಂ ಪೋಲೀಸ್ ಠಾಣೆಯಲ್ಲಿ ಪೋಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 24-08-2022 ರಂದು ಈ ಪ್ರಕರಣದ ಕಡತವನ್ನು ಚಾಸಾ 12 ರವರಿಂದ ಪಡೆದು ಪರಿಶೀಲಿಸಿ ತನಿಖೆಯನ್ನು ಮುಂದುವರಿಸಿರುತ್ತೇನೆ. ಚಾಸಾ 12 ರವರು ಈವರೆಗೆ ಕೈಗೊಂಡ ತನಿಖೆಯನ್ನು ಪರಿಶೀಲಿಸಿ ಆ ವೇಳೆಗಾಗಲೇ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ಆರೋಪಿಯ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ನಿಪಿ. 2 ರಿಂದ 6 ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ರಾತ್ರಿ 10.30 ಗಂಟೆಗೆ ಸದರಿ ಕೃತ್ಯ ನಡೆದಿರುತ್ತದೆ. ಕೃತ್ಯ ಸ್ಥಳಕ್ಕೆ ನಾನು ತನಿಖಾ ಕಾಲಕ್ಕೆ ಹೋಗಿರುವುದಿಲ್ಲ. ಸಮವಸ್ತ್ರದಲ್ಲಿ ಇದ್ದ ಸಮಯದಲ್ಲಿ ಸಾರ್ವಜನಿಕರು ಸಾರ್ವಜನಿಕವಾಗಿ ಅದನ್ನು ಪ್ರಶ್ನೆ ಮಾಡಿದರೆ ಅದು ತಪ್ಪಲ್ಲ ಎಂದರೆ ಸರಿ. ಸ್ಥಳದಿಂದ ಸ್ವಲ್ಪ ದೂರದಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಿರುತ್ತಾರೆ. ಘಟನಾ ಸ್ಥಳದಲ್ಲಿ ನಮ್ಮ ಸಿಬ್ಬಂದಿಗಳು ಒನವೇ ರಸ್ತೆಯಲ್ಲಿ ಹೋಗುತ್ತಿದ್ದರಿಂದ ಅದನ್ನು ಆರೋಪಿಯು ಪ್ರಶ್ನೆ ಮಾಡಿದ್ದಕ್ಕೇ ಅವಮಾನವಾಗಿರುತ್ತದೆ ಎಂದರೆ ಸರಿಯಲ್ಲ.

ಪಿರ್ಯಾದಿದಾರರಿಗೆ ಬಲಮೊಣಕಾಲಿನ ಕೆಳಗೆ ಮತ್ತು ಪಾದದ ಮೇಲೆ ತೆರಚಿದ ಗಾಯವಾಗಿರುತ್ತದೆ. ಗಾಯಕ್ಕೆ ಸಂಬಂಧಪಟ್ಟಂತೆ ಯಾವುದೇ ಪೋಟೋವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಯಾವುದೇ ಗಾಯ ಆಗಿಲ್ಲ ಆ ಕಾರಣ ಯಾವುದೇ ಪೋಟೋವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಸಿಸಿಟಿವಿ ಫುಟೇಂಜ್ ಇದ್ದರೂ ಕೂಡ ಅದನ್ನು ಮರೆಮಾಚಿ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ .

ಸಾಮಾನ್ಯವಾಗಿ ಗಾಯಾಳುವನ್ನು ಕೆ ಸಿ ಜನರಲ್ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇವೆ ಎಂದರೆ ಸರಿ. ಚಾಸಾ 1 ರವರು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಕರ್ತವ್ಯಕ್ಕೆ ಅಡ್ಡಿಯಾಗಿರುವುದಿಲ್ಲ, ಸುಳ್ಳು ದೂರನ್ನು ಪಡೆದುಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ